**ಸದನದಲ್ಲಿ ಉತ್ತರಿಸುವ**
**ಪ್ರಶ್ನೆಗಳ ಪಟ್ಟಿ**
**ಒಟ್ಟು ಪ್ರಶ್ನೆಗಳು – ೧೫**

**ಪಟ್ಟಿ–೦೬**

# ಕರ್ನಾಟಕ ವಿಧಾನ ಪರಿಷತ್ತು

**ನೂರ ಐವತ್ತೊಂಭತ್ತನೆಯ ಅಧಿವೇಶನ**

**ಸೋಮವಾರ, ದಿನಾಂಕ : ೨೪ನೇ ಆಗಸ್ಟ್, ೨೦೨೬**

---

**ಸಮೂಹ – I**

೧. ಸಮಾಜ ಕಲ್ಯಾಣ ಸಚಿವರು

೨. ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು

೩. ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

೪. ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು

೫. ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

೬. ಉನ್ನತ ಶಿಕ್ಷಣ ಸಚಿವರು

---

## ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಸಿಂಧನೂರು ತಾಲ್ಲೂಕಿಗೆ ಹೆಚ್ಚುವರಿ ವಸತಿ ನಿಲಯಗಳನ್ನು ಮಂಜೂರು ಮಾಡುವ ಬಗ್ಗೆ

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭೆಯಿಂದ ಚುನಾಯಿತರಾದವರು) –**

೭೬ (೮೮೦) ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಿಂಧನೂರು ತಾಲ್ಲೂಕಿನಲ್ಲಿ ಹಿಂದುಳಿದ ವರ್ಗಗಳ ಒಟ್ಟು ೦೫ ಮೆಟ್ರಿಕ್ ನಂತರದ ಬಾಲಕರ ಮತ್ತು ಬಾಲಕಿಯರ ವಿದ್ಯಾರ್ಥಿ ನಿಲಯಗಳು

ಕರ್ತವ್ಯ ನಿರ್ವಹಿಸುತ್ತಿದ್ದು, ಮಂಜೂರಾತಿ ಸಂಖ್ಯೆಗಿಂತ ಹೆಚ್ಚಿನ ವಿದ್ಯಾರ್ಥಿಗಳು ದಾಖಲಾತಿ ಕೋರಿ ಅರ್ಜಿ ಸಲ್ಲಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಒಟ್ಟು ೦೫ ಹಾಸ್ಟೆಲ್‌ಗಳ ಮಂಜೂರಾತಿ ಸಾಮರ್ಥ್ಯ ೬೯೩ ವಿದ್ಯಾರ್ಥಿಗಳ ಮಾತ್ರ ಆಗಿದ್ದು, ಅದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಪ್ರವೇಶಾತಿ ಪಡೆದಲ್ಲಿ ವಿದ್ಯಾರ್ಥಿಗಳಿಗೆ ಸಮರ್ಪಕವಾಗಿ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕಷ್ಟ ಸಾಧ್ಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಬಂದಿದ್ದಲ್ಲಿ, ಈ ಸಂಬಂಧ ಜಿಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ರಾಯಚೂರು ಇವರಿಂದ ವರದಿ ಪಡೆದು ಪ್ರವೇಶಾತಿ ಪಡೆಯುವ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಅಗತ್ಯವಿರುವ ಹೆಚ್ಚುವರಿ ವಿದ್ಯಾರ್ಥಿ ನಿಲಯಗಳನ್ನು ಮಂಜೂರು ಮಾಡುವ ಸಂಬಂಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಈ) ಸಿಂಧನೂರು ತಾಲ್ಲೂಕಿಗೆ ಅಗತ್ಯವಿರುವ ಹೆಚ್ಚುವರಿ ವಿದ್ಯಾರ್ಥಿ ನಿಲಯಗಳನ್ನು ನಿರ್ಮಿಸಲು ಯಾವ ಕಾಲಮಿತಿಯೊಳಗೆ ಸರ್ಕಾರದಿಂದ ಮಂಜೂರಾತಿ ನೀಡಲಾಗುವುದು ?

## ಕೊಪ್ಪಳ ವಿಶ್ವವಿದ್ಯಾಲಯ ವ್ಯಾಪ್ತಿಯಲ್ಲಿ ಇತ್ತೀಚೆಗೆ ನಡೆದ ಪರೀಕ್ಷೆಗಳಲ್ಲಿನ ಪ್ರಶ್ನೆಪತ್ರಿಕೆ ಮತ್ತು ಉತ್ತರಪತ್ರಿಕೆ ಸಮರ್ಪಕವಾಗಿ ಪೂರೈಕೆಯಾಗದ ಕುರಿತು

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭೆಯಿಂದ ಚುನಾಯಿತರಾದವರು) –**

೭೭ (೯೦೩) ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಪ್ಪಳ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಇತ್ತೀಚೆಗೆ ನಡೆದ ಪರೀಕ್ಷೆಗಳಲ್ಲಿ ಪಶ್ನೆಪತ್ರಿಕೆ ಮತ್ತು ಉತ್ತರಪತ್ರಿಕೆಗಳು ಸಮರ್ಪಕವಾಗಿ ಪೂರೈಕೆಯಾಗದೆ ವಿದ್ಯಾರ್ಥಿಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ಅವ್ಯವಸ್ಥೆಗೆ ಕಾರಣವೇನು ; (ವಿವರ ಒದಗಿಸುವುದು)

(ಆ) ಪರೀಕ್ಷಾ ಕೇಂದ್ರಗಳಲ್ಲಿ ಪ್ರಶ್ನೆಪತ್ರಿಕೆ ವಿತರಣೆ, ಉತ್ತರಪತ್ರಿಕೆ ಹಾಗೂ ನೋಂದಣಿ ಸಂಖ್ಯೆಗಳ ನಿರ್ವಹಣೆಯಲ್ಲಿ ಉಂಟಾದ ಗೊಂದಲದಿಂದ ವಿದ್ಯಾರ್ಥಿಗಳು ನಿಗದಿತ ಸಮಯದಲ್ಲಿ ಪರೀಕ್ಷೆ ಬರೆಯಲು ಸಾಧ್ಯವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಇಂತಹ ವಿದ್ಯಾರ್ಥಿಗಳಿಗೆ ಪರಿಹಾರವಾಗಿ ಕೈಗೊಂಡ ಕ್ರಮವೇನು ; (ವಿವರ ಒದಗಿಸುವುದು)

(ಇ) ಕೊಪ್ಪಳ ವಿಶ್ವವಿದ್ಯಾಲಯದ ಪರೀಕ್ಷೆಗಳಲ್ಲಿ ಅಗತ್ಯ ಪ್ರಮಾಣದ ಪ್ರಶ್ನೆಪತ್ರಿಕೆ ಮತ್ತು ಉತ್ತರ ಪತ್ರಿಕೆಗಳನ್ನು ಮುಂಚಿತವಾಗಿ ಸಿದ್ಧಪಡಿಸದೆ ಕೊರತೆ ಉಂಟಾಗಿರುವುದಕ್ಕೆ ಸಂಬಂಧಿಸಿದ ಅಧಿಕಾರಿಗಳ ನಿರ್ಲಕ್ಷ್ಯ ಸರ್ಕಾರದ ಗಮನಕ್ಕೆ ಬಂದಿದೆಯೇ ; ತಪ್ಪಿತಸ್ಥರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ ; (ವಿವರ ಒದಗಿಸುವುದು)

(ಈ) ಕೊಪ್ಪಳ ವಿಶ್ವವಿದ್ಯಾಲಯದಲ್ಲಿ ಪರೀಕ್ಷಾ ವ್ಯವಸ್ಥೆಯಲ್ಲಿನ ಇಂತಹ ಲೋಪಗಳಿಂದ ವಿದ್ಯಾರ್ಥಿಗಳ ಶೈಕ್ಷಣಿಕ ಭವಿಷ್ಯಕ್ಕೆ ತೊಂದರೆಯಾಗದಂತೆ ಪ್ರಶ್ನೆಪತ್ರಿಕೆ ಮುದ್ರಣ, ಸಂಗ್ರಹಣೆ, ವಿತರಣೆ ಮತ್ತು ಪರೀಕ್ಷಾ ಕೇಂದ್ರಗಳ ನಿರ್ವಹಣೆಗೆ ಯಾವುದೇ ಹೊಸ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆಯೇ ; (ವಿವರ ಒದಗಿಸುವುದು)

(ಉ) ಕೊಪ್ಪಳ ವಿಶ್ವವಿದ್ಯಾಲಯದ ಪರೀಕ್ಷಾ ಅವ್ಯವಸ್ಥೆ ಕುರಿತು ಇದುವರೆಗೆ ಎಷ್ಟು ದೂರುಗಳು ಬಂದಿವೆ ; ಎಷ್ಟು ವಿದ್ಯಾರ್ಥಿಗಳು ಬಾಧಿತರಾಗಿದ್ದಾರೆ ಹಾಗೂ ಈ ಬಗ್ಗೆ ತನಿಖೆ ನಡೆಸಲಾಗಿದೆಯೇ ; ತನಿಖೆಯ ವರದಿ ಆಧರಿಸಿ ಕೈಗೊಂಡಿರುವ ಕ್ರಮಗಳೇನು ? (ವಿವರ ಒದಗಿಸುವುದು)

# ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳಲ್ಲಿನ ಶೈಕ್ಷಣಿಕ ಯೋಜನೆಗಳ ಬಗ್ಗೆ

**ಶ್ರೀ ಶಿವಕುಮಾರ್ ಕೆ. (ನಾಮನಿರ್ದೇಶನ ಹೊಂದಿದವರು) –**

೭೮ (೯೨೫) ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ವಸತಿ ಶಿಕ್ಷಣ ಸಂಸ್ಥೆಗಳ ಸಂಘ (KREIS) ವಸತಿ ನಿಲಯಗಳಲ್ಲಿ ಮೃತಪಟ್ಟ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ; ವೈದ್ಯಕೀಯ, ಆಕಸ್ಮಿಕ ಮತ್ತು ಆತ್ಮಹತ್ಯೆಯಂತಹ ಪ್ರಕರಣಗಳ ಕುರಿತು ಜಿಲ್ಲಾವಾರು ಮಾಹಿತಿ ಒದಗಿಸುವುದು ;

(ಆ) ರಾಜ್ಯದ ವಸತಿ ಶಿಕ್ಷಣ ಸಂಸ್ಥೆಗಳ ಸಂಘ (KREIS) ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳ ಸಂಖ್ಯೆ ಎಷ್ಟು ; ಕಡೆಯ ನೇಮಕಾತಿ ಎಷ್ಟು ಹುದ್ದೆಗಳಿಗೆ ಯಾವಾಗ ಜರುಗಿತ್ತು ; ಪ್ರಸ್ತುತ ಖಾಯಂ ಶಿಕ್ಷಕರು ಹಾಗೂ ಗುತ್ತಿಗೆ ಆಧಾರದ ಶಿಕ್ಷಕರ ಸಂಖ್ಯೆ ಎಷ್ಟು ;

(ಇ) ರಾಜ್ಯದ ವಸತಿ ಶಿಕ್ಷಣ ಸಂಸ್ಥೆಗಳ ಸಂಘ (KREIS) ವ್ಯಾಪ್ತಿಯ ವಸತಿ ಶಾಲೆಗಳ ವಿದ್ಯಾರ್ಥಿಗಳಿಗೆ ಶೂ ಭಾಗ್ಯ ಯೋಜನೆಯಡಿ ಒದಗಿಸಲಾಗುವ ಶೂ ಮತ್ತು ಸಾಕ್ಸ್ ಅನ್ನು ರಾಜ್ಯದ ದಲಿತ ಕುಶಲಕರ್ಮಿಗಳಿಂದ ಖರೀದಿಸಲಾಗಿದೆಯೇ ; ಖರೀದಿಸಿದ್ದರೆ, ಎಷ್ಟು ಉದ್ಯಮಿಗಳಿಂದ ಎಷ್ಟು ಮೊತ್ತಕ್ಕೆ ಖರೀದಿಸಲಾಗಿದೆ ; (ಮಾಹಿತಿ ನೀಡುವುದು)

(ಈ) ಸಮಾಜ ಕಲ್ಯಾಣ ಇಲಾಖೆಯಡಿಯಲ್ಲಿ ಬರುವ ವಿದ್ಯಾರ್ಥಿ ನಿಲಯಗಳಲ್ಲಿ ಭ್ರಷ್ಟಾಚಾರ, ಕಳಪೆ ಆಹಾರ ಸಾಮಗ್ರಿ ಪೂರೈಕೆ, ಮೂಲಸೌಕರ್ಯ ಕೊರತೆ ಹಾಗೂ ಕರ್ತವ್ಯ ಲೋಪದಲ್ಲಿ ದಾಖಲಾಗಿರುವ ಪ್ರಕರಣಗಳು ಎಷ್ಟು ; ಈ ಕುರಿತು ಕೈಗೊಂಡಿರುವ ಕ್ರಮಗಳೇನು ?

## ಮೈಸೂರು ದಸರಾ ಕಾರ್ಯಕ್ರಮದ ಬಗ್ಗೆ

**ಶ್ರೀ ರಘು ಆರ್. (ವಿಧಾನಸಭೆಯಿಂದ ಚುನಾಯಿತರಾದವರು) –**

೭೯ (೮೧೬) ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಸಾಲಿನಲ್ಲಿ ಮೈಸೂರು ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸರ್ಕಾರ ವೆಚ್ಚ ಮಾಡಿರುವ ಅನುದಾನವೆಷ್ಟು ; (ಮಾಹಿತಿ ನೀಡುವುದು) ;

(ಆ) ಕಲಾವಿದರನ್ನು ಆಯ್ಕೆ ಮಾಡಿಕೊಳ್ಳಲು ಅನುಸರಿಸಿದ ಮಾರ್ಗಸೂಚನೆಗಳೇನು ; (ಮಾಹಿತಿ ನೀಡುವುದು)

(ಇ) ೫ ಲಕ್ಷಕ್ಕಿಂತ ಹೆಚ್ಚು ಮೊತ್ತದ ಕಾರ್ಯಕ್ರಮಗಳಿಗೆ ಪಾರದರ್ಶಕ ಕಾಯ್ದೆಗಳನ್ನು ಅನುಸರಿಸಲಾಗಿದೆಯೇ ? (ಸಂಪೂರ್ಣ ಮಾಹಿತಿ ನೀಡುವುದು)

## ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಪ್ರೌಢಶಾಲಾ ಶಿಕ್ಷಕರಿಗೆ ಪದವಿಪೂರ್ವ ಉಪನ್ಯಾಸಕರ ಹುದ್ದೆಗೆ ಬಡ್ತಿ ನೀಡುವಲ್ಲಿ ಆಗುತ್ತಿರುವ ವಿಳಂಬದ ಕುರಿತು

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ ) –**

೮೦ (೭೯೮) ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಇರುವ ಒಟ್ಟು ಸರ್ಕಾರಿ ಪದವಿಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು ; ಈ ಕಾಲೇಜುಗಳಿಗೆ ಮಂಜೂರಾದ ಒಟ್ಟು ಬೋಧಕ ಮತ್ತು ಬೋಧಕೇತರ ಹುದ್ದೆಗಳು ಎಷ್ಟು ; ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರುಗಳ ಸಂಖ್ಯೆ ಎಷ್ಟು ; (ವಿಷಯಗಳ ಸಮೇತ ಜಿಲ್ಲಾವಾರು ಹಾಗೂ ವಿಭಾಗವಾರು ಮಾಹಿತಿ ನೀಡುವುದು)

(ಆ) ಸರ್ಕಾರಿ ಪದವಿಪೂರ್ವ ಕಾಲೇಜುಗಳಲ್ಲಿ ಪ್ರೌಢ ಶಾಲೆಯಿಂದ ಬಡ್ತಿ ಮೂಲಕ ನೇಮಕ ಹೊಂದಿರುವ ಉಪನ್ಯಾಸಕರ ಶೇಕಡಾವಾರು ಸಂಖ್ಯೆ ಎಷ್ಟು ; ಪ್ರಸ್ತುತ ಬಡ್ತಿ ಮೂಲಕ ಎಷ್ಟು ಉಪನ್ಯಾಸಕರ ಹುದ್ದೆಗಳನ್ನು ತುಂಬಿಕೊಳ್ಳಲು ಅನುಮೋದನೆ ನೀಡಲಾಗಿದೆ ; (ವಿಷಯವಾರು ಹುದ್ದೆಗಳ ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಪ್ರೌಢ ಶಾಲಾ ಶಿಕ್ಷಕರಿಗೆ ಪದವಿಪೂರ್ವ ಕಾಲೇಜಿನ ಉಪನ್ಯಾಸಕರ ಹುದ್ದೆಗೆ ಬಡ್ತಿ ನೀಡಲು ಸರ್ಕಾರ ಅನುಸರಿಸುತ್ತಿರುವ ನಿಯಮಗಳು ಹಾಗೂ ಮಾನದಂಡಗಳು ಯಾವುವು ;

(ಈ) ಪ್ರೌಢ ಶಾಲಾ ಶಿಕ್ಷಕರಿಗೆ ಪದವಿಪೂರ್ವ ಕಾಲೇಜಿನ ಉಪನ್ಯಾಸಕರ ಹುದ್ದೆಗೆ ಬಡ್ತಿ ನೀಡುವಲ್ಲಿ ವಿಭಾಗವಾರು ಜೇಷ್ಠತಾ ಪಟ್ಟಿಯನ್ನು ರಚಿಸುವಾಗ ಅನುಸರಿಸುವ ಮಾನದಂಡಗಳೇನು ;

(ಉ) ಕೆಲವೇ ತಿಂಗಳುಗಳಲ್ಲಿ ಪ್ರೌಢ ಶಾಲಾ ಶಿಕ್ಷಕರಿಂದ ಪದವಿಪೂರ್ವ ಉಪನ್ಯಾಸಕರ ಹುದ್ದೆಗಳ ಬಡ್ತಿ ಕಾರ್ಯವನ್ನು ಪೂರ್ಣಗೊಳಿಸಲಾಗುವುದು ಎಂದು ಸರ್ಕಾರ ತಿಳಿಸಿದ್ದು, ಇಲ್ಲಿಯವರೆಗೂ ಬಡ್ತಿ ಕಾರ್ಯವನ್ನು ಮಾಡದೆ ಇರಲು ಕಾರಣವೇನು ; ಯಾವ ಕಾಲಮಿತಿಯಲ್ಲಿ ಬಡ್ತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು ? (ವಿವರ ನೀಡುವುದು)

## ತಾಲ್ಲೂಕು ಮಟ್ಟದ ವಾಲ್ಮೀಕಿ ಭವನಗಳ ಬಗ್ಗೆ

**ಶ್ರೀ ಎನ್.ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು) –**

೮೧ (೮೯೧) ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಯಚೂರು ಜಿಲ್ಲೆಯ ಮಾನ್ವಿ ಪಟ್ಟಣದಲ್ಲಿ ತಾಲ್ಲೂಕು ಮಟ್ಟದ "ವಾಲ್ಮೀಕಿ ಭವನ" ನಿರ್ಮಾಣ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಆ) ಸದರಿ ಭವನ ನಿರ್ಮಾಣ ಮಾಡಲು ಯಾವ ವರ್ಷದಲ್ಲಿ ಮಂಜೂರಾತಿ ನೀಡಲಾಗಿದೆ ; ಮಂಜೂರಾಗಿರುವ ಅನುದಾನ ಎಷ್ಟು ; ಬಿಡುಗಡೆ ಮಾಡಿರುವ ಅನುದಾನ ಎಷ್ಟು ? (ಸಂಪೂರ್ಣ ವಿವರ ನೀಡುವುದು)

## ಪರಿಸರ ಪರಿಹಾರ ನಿಧಿಯನ್ನು ದುರುಪಯೋಗ ಪಡಿಸಿಕೊಂಡಿರುವ ಬಗ್ಗೆ

**ಡಾ: ಕೆ. ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು) –**

೮೨ (೯೪೯) ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೩ ವರ್ಷಗಳಲ್ಲಿ ಪರಿಸರ ಪರಿಹಾರ ನಿಧಿ ಸಂಗ್ರಹಿಸಿರುವ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆ.ಎಸ್.ಪಿ.ಸಿ.ಬಿ.) ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿ (ಎನ್.ಜಿ.ಟಿ) ಸಲ್ಲಿಸಿರುವ ಅಫಿಡವಿಟ್‌ನಲ್ಲಿ ಹಣದ ಬಳಕೆಯ ವಿವರವಿಲ್ಲವೆಂದು ತಿಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಕಳೆದ ೩ ವರ್ಷಗಳಿಂದ ಪರಿಸರ ಪರಿಹಾರ ನಿಧಿಗೆ ಎಷ್ಟು ಮೊತ್ತ ಸಂಗ್ರಹಿಸಲಾಗಿದೆ ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಪರಿಸರ ಪರಿಹಾರ ನಿಧಿಯ ಕಾರ್ಯ ವಿಧಾನಗಳು ಯಾವುವು ; (ಪೂರ್ಣ ಮಾಹಿತಿ ನೀಡುವುದು)

(ಈ) ಪರಿಸರ ಪರಿಹಾರ ನಿಧಿಯಿಂದ ಸಂಗ್ರಹಿಸಲಾದ ಮೊತ್ತವನ್ನು ಯಾವ ಯಾವ ಉದ್ದೇಶಗಳಿಗೆ ವಿನಿಯೋಗಿಸಲಾಗಿದೆ ; (ವಿವರ ಒದಗಿಸುವುದು)

(ಉ) ಬೆಂಗಳೂರು ನಗರದಲ್ಲಿನ ವಾಯು ಮತ್ತು ಜಲ ಮಾಲಿನ್ಯದ ಸ್ಥಿತಿಯ ಕುರಿತು ಪರಿಸರ ಪುನರ್ ಸ್ಥಾಪನೆಗೆ ಕೈಗೊಂಡ ಕ್ರಮಗಳೇನು ? (ವಿವರ ಒದಗಿಸುವುದು)

## ಗ್ರಾಮೀಣ ಕೃಪಾಂಕ ರಹಿತ ಶಿಕ್ಷಕರು ಕೋರ್ಟ್ ಆದೇಶದಂತೆ ವೇತನ ಪಡೆಯುತ್ತಿರುವ ಬಗ್ಗೆ

**ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ ) –**

೮೩ (೮೩೯) ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗ್ರಾಮೀಣ ಕೃಪಾಂಕ ರಹಿತ ಶಿಕ್ಷಕರು ಕೋರ್ಟ್ ಆದೇಶದಂತೆ ವೇತನ ಸೌಲಭ್ಯಗಳನ್ನು ಪಡೆಯುತ್ತಿದ್ದು, ನಿಜವಾಗಲೂ ಕರ್ತವ್ಯ ನಿರ್ವಹಿಸಿದ ಗ್ರಾಮೀಣ ಕೃಪಾಂಕ ಶಿಕ್ಷಕರು ವೇತನ ತಾರತಮ್ಯ ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಗ್ರಾಮೀಣ ಕೃಪಾಂಕ ಶಿಕ್ಷಕರ ವೇತನ ತಾರತಮ್ಯ ಸರಿಪಡಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ?

## ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಅಂಕಪಟ್ಟಿ ಪದವಿ ಪ್ರಮಾಣಪತ್ರಗಳ ಬಗ್ಗೆ

**ಶ್ರೀ ಹೆಚ್.ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೮೪ (೯೫೩) ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉನ್ನತ ಶಿಕ್ಷಣ ವ್ಯಾಪ್ತಿಯಲ್ಲಿ ಬರುವ ವಿಶ್ವವಿದ್ಯಾಲಯಗಳು ಎಷ್ಟು ; ಅವು ಯಾವುವು ; ಸ್ಥಾಪನೆಯಾದ ವರ್ಷ, ಹಾಲಿ ಕಾರ್ಯನಿರ್ವಹಿಸುತ್ತಿರುವ ಕುಲಪತಿ, ಕುಲಪತಿಗಳು (ಆಡಳಿತ) ಮತ್ತು ಕುಲಸಚಿವರು (ಮೌಲ್ಯಮಾಪನ)ರವರುಗಳ ಹೆಸರು, ವಿಳಾಸ, ದೂರವಾಣಿ ಸಂಖ್ಯೆ ಒಳಗೊಂಡಂತೆ ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು ;

(ಆ) ರಾಜ್ಯದ ಎಷ್ಟು ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳಿಗೆ ಅಂಕಪಟ್ಟಿ ಪದವಿ ಪ್ರಮಾಣಪತ್ರ ನೀಡದೆ ವಿದ್ಯಾರ್ಥಿಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಕೈಗೊಂಡ ಕ್ರಮಗಳೇನು ;

(ಇ) ಕಳೆದ ೩ ವರ್ಷಗಳಲ್ಲಿ ಎಷ್ಟು ವಿದ್ಯಾರ್ಥಿಗಳ ಅಂಕಪಟ್ಟಿ ಮತ್ತು ಪದವಿ ಪ್ರಮಾಣಪತ್ರಗಳು ಬಾಕಿ ಉಳಿದಿವೆ ; ಯಾವ ಕಾರಣಕ್ಕೆ ವಿಳಂಬವಾಗಿರುವುದು ;

(ಈ) ವಿಶ್ವವಿದ್ಯಾಲಯವಾರು ಬಾಕಿ ಇರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ;

(ಉ) ಪ್ರಮಾಣಪತ್ರ ನೀಡಲು ನಿಗದಿಪಡಿಸಿರುವ ಕಾಲಮಿತಿ ಎಷ್ಟು ;

(ಊ) ಸರ್ಕಾರ ಯಾವ ಕ್ರಮ ಕೈಗೊಂಡಿದೆ ;

(ಋ) ಉದ್ಯೋಗ, ಉನ್ನತ ಶಿಕ್ಷಣ, ವಿದೇಶಿ ಶಿಕ್ಷಣ ಅಥವಾ ಸರ್ಕಾರಿ ನೇಮಕಾತಿಗೆ ಅರ್ಜಿ ಸಲ್ಲಿಸಲು ಸಾಧ್ಯವಾಗದೇ ತೊಂದರೆ ಅನುಭವಿಸುತ್ತಿರುವ ವಿದ್ಯಾರ್ಥಿಗಳ ಬಗ್ಗೆ ಸರ್ಕಾರಕ್ಕೆ ಮಾಹಿತಿ ಇದೆಯೇ ; (ವಿವರ ನೀಡುವುದು)

(ಎ) ನಿಗದಿತ ಅವಧಿಯಲ್ಲಿ ಪ್ರಮಾಣಪತ್ರ ನೀಡದ ವಿಶ್ವವಿದ್ಯಾಲಯಗಳ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು ; (ವಿವರ ನೀಡುವುದು)

(ಏ) ಉದ್ಯೋಗ, ಉನ್ನತ ಶಿಕ್ಷಣ, ವಿದೇಶಿ ಶಿಕ್ಷಣ ಅಥವಾ ಸರ್ಕಾರಿ ನೇಮಕಾತಿಗೆ ಅರ್ಜಿ ಸಲ್ಲಿಸಲು ಸಾಧ್ಯವಾಗದೇ ತೊಂದರೆ ಅನುಭವಿಸುತ್ತಿರುವ ವಿದ್ಯಾರ್ಥಿಗಳ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ ? (ವಿವರ ನೀಡುವುದು)

## ಪದವಿಪೂರ್ವ ಕಾಲೇಜು ವಿದ್ಯಾರ್ಥಿಗಳಿಗೆ ಪೂರ್ಣ ಪ್ರಮಾಣದಲ್ಲಿ ಪಠ್ಯಪುಸ್ತಕ ವಿತರಣೆ ಮಾಡದಿರುವ ಬಗ್ಗೆ

**ಶ್ರೀ ಕೆ. ವಿವೇಕಾನಂದ (ಶಿಕ್ಷಕರ ಕ್ಷೇತ್ರ) –**

೮೫ (೮೨೨) ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಸರ್ಕಾರಿ ಪದವಿಪೂರ್ವ ಕಾಲೇಜಿನ ಪ್ರಥಮ ಮತ್ತು ದ್ವಿತೀಯ ಪಿ.ಯು.ಸಿ. ವಿದ್ಯಾರ್ಥಿಗಳಿಗೆ ಸರ್ಕಾರದಿಂದ ನೀಡುವ ಪಠ್ಯಪುಸ್ತಕಗಳನ್ನು ರಾಜ್ಯದ ಎಲ್ಲಾ ಕಾಲೇಜು ವಿದ್ಯಾರ್ಥಿಗಳಿಗೆ ಪೂರ್ಣ ಪ್ರಮಾಣದಲ್ಲಿ ನೀಡಲಾಗಿದೆಯೇ ;

(ಆ) ರಾಜ್ಯದ ಕೆಲವು ಕಡೆ ಕಾಲೇಜು ವಿದ್ಯಾರ್ಥಿಗಳಿಗೆ ಇನ್ನೂ ಪಠ್ಯಪುಸ್ತಕ ನೀಡಲಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ, ಇಂತಹ ಪ್ರಕರಣಗಳ ಪೂರ್ಣ ವಿವರ ನೀಡುವುದು ;

(ಇ) ಪದವಿಪೂರ್ವ ಕಾಲೇಜುಗಳು ಆರಂಭವಾಗಿ ಅರ್ಧ ಶೈಕ್ಷಣಿಕ ವರ್ಷವೇ ಕಳೆದಿದ್ದು, ಪಠ್ಯಪುಸ್ತಕ ವಿತರಣೆಯಾಗದೆ ಇರುವುದರಿಂದ ವಿದ್ಯಾರ್ಥಿಗಳ ಕಲಿಕೆ ಕುಂಠಿತವಾಗಿರುವುದರಿಂದ ಸರ್ಕಾರ ಇದಕ್ಕೆ ಕಾರಣಕರ್ತರಾದ ಮೇಲೆ ಯಾವ ಕ್ರಮವನ್ನು ಕೈಗೊಂಡಿದೆ ?

## ಕಲಬುರಗಿ ಜಿಲ್ಲೆಯ ಶಾಲಾ ಕಟ್ಟಡಗಳು ಶಿಥಿಲಾವಸ್ಥೆಯಲ್ಲಿರುವ ಕುರಿತು

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭೆಯಿಂದ ಚುನಾಯಿತರಾದವರು) –**

೮೬ (೮೦೬) ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲಬುರಗಿ ಜಿಲ್ಲೆ, ಆಳಂದ ತಾಲ್ಲೂಕಿನ ಸಂಗೋಳಗಿ (ಸಿ) ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಕಟ್ಟಡದ ತಾರಸಿಯ ಗಾರೆ ಕುಸಿದು ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಭಾನುವಾರ ರಜೆ ಇದ್ದಿದ್ದರಿಂದ ಅನಾಹುತ ತಪ್ಪಿರುವುದು ನಿಜವೇ ;

(ಆ) ಕಲಬುರಗಿ ನಗರದ ಸರ್ಕಾರಿ ಮಹಿಳಾ ಪಿಯು ಕಾಲೇಜಿನ ಚಾವಣಿ ಕುಸಿದ ಬೆನ್ನಲ್ಲೇ ಈ ಘಟನೆ ಸಂಭವಿಸಲು ಶಿಕ್ಷಣ ಇಲಾಖೆಯ ನಿರ್ಲಕ್ಷ್ಯವೇ

ಕಾರಣವಲ್ಲವೇ ; ಈ ಬಗ್ಗೆ ಸಾರ್ವಜನಿಕರ ಆಕ್ರೋಶಕ್ಕೆ ಸರ್ಕಾರದ ಉತ್ತರವೇನು ;

(ಇ) ಈ ಶಾಲೆಯ ೧೧ ಕೋಣೆಗಳ ಪೈಕಿ ೬ ಕೋಣೆಗಳಲ್ಲಿ ಮಾತ್ರ ತರಗತಿ ನಡೆಯುತ್ತಿದ್ದು, ಅಪಾಯಕಾರಿಯಾಗಿರುವ ೩ ಕೋಣೆಗಳನ್ನು ತಕ್ಷಣ ನೆಲಸಮ ಮಾಡಲು ಅಧಿಕಾರಿಗಳು ಶಿಫಾರಸ್ಸು ಮಾಡಿದ್ದರೂ ಕ್ರಮ ಕೈಗೊಳ್ಳದಿರಲು ಕಾರಣಗಳೇನು ;

(ಈ) ಕಲಬುರಗಿ ಜಿಲ್ಲೆ ಸೇರಿದಂತೆ ರಾಜ್ಯದಲ್ಲಿರುವ ಅಪಾಯಕಾರಿ ಹಾಗೂ ಶಿಥಿಲ ಶಾಲಾ–ಕಾಲೇಜು ಕೋಣೆಗಳನ್ನು ಗುರುತಿಸಿ, ತುರ್ತು ದುರಸ್ತಿ ಅಥವಾ ಹೊಸ ಕೋಣೆಗಳ ನಿರ್ಮಾಣಕ್ಕೆ ಸರ್ಕಾರ ಕೈಗೊಂಡಿರುವ ವಿಶೇಷ ಕ್ರಿಯಾ ಯೋಜನೆಗಳೇನು ? (ವಿವರ ನೀಡುವುದು)

**ಶಾಲೆಗಳ ನಿರ್ವಹಣೆಗೆ ಸೂಕ್ತ ಅನುದಾನ ಬಿಡುಗಡೆ ಮಾಡುವ ಬಗ್ಗೆ**

**ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ ) –**

೮೭ (೯೪೨) ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಸರ್ಕಾರಿ ಪ್ರಾಥಮಿಕ, ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಆ) ಸದರಿ ಶಾಲೆಗಳಲ್ಲಿ ಮಂಜೂರಾದ ಡಿ ಗ್ರೂಪ್ ನೌಕರರ ಸಂಖ್ಯೆ ಎಷ್ಟು ; ಕಾರ್ಯನಿರ್ವಹಿಸುತ್ತಿರುವ ನೌಕರರ ಸಂಖ್ಯೆ ಎಷ್ಟು ;

(ಇ) ಕಳೆದ ಮೂರು ವರ್ಷಗಳಲ್ಲಿ ಮಕ್ಕಳಿಂದ ಶಾಲೆಯ ಶೌಚಾಲಯ ಮತ್ತು ಶಾಲಾ ಆವರಣ ಸ್ವಚ್ಛಗೊಳಿಸುವ ಕೆಲಸ ಮಾಡಿಸಿದ ಕಾರಣ ಎಷ್ಟು ಶಿಕ್ಷಕರ ಮೇಲೆ ದೂರು ದಾಖಲಿಸಲಾಗಿದೆ ;

(ಈ) ಹಲವು ಶಾಲೆಗಳಲ್ಲಿ ಡಿ ಗ್ರೂಪ್ ನೌಕರರು ಇಲ್ಲದ ಕಾರಣ ಕಸ ಗುಡಿಸಲು, ಶೌಚಾಲಯ ಸ್ವಚ್ಛಗೊಳಿಸಲು ಮತ್ತು ಶಾಲಾ ಆವರಣದ ನೈರ್ಮಲ್ಯ ಕಾಪಾಡುವ ಕೆಲಸವನ್ನು ನಿರ್ವಹಿಸುವವರು ಯಾರು ; ಸದರಿ ಕೆಲಸಗಳನ್ನು ನಿರ್ವಹಿಸಲು ಪ್ರತಿ ಶಾಲೆಗೆ ಒಬ್ಬರಂತೆ ಡಿ ಗ್ರೂಪ್ ನೌಕರರನ್ನು ನೇಮಕ ಮಾಡಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು ;

(ಉ) ಶಾಲಾ ನಿರ್ವಹಣೆಗಾಗಿ ಮುಖ್ಯೋಪಾಧ್ಯಾಯರಿಗೆ ಸರ್ಕಾರ ನೀಡುತ್ತಿರುವ ಅನುದಾನವೆಷ್ಟು ; ಸದರಿ ಅನುದಾನವನ್ನು ಯಾವ ಉದ್ದೇಶಗಳಿಗಾಗಿ ಬಳಸಬೇಕಾಗುತ್ತದೆ ; ಪರೀಕ್ಷೆಗಳ ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆಗಾಗಿ ಸರ್ಕಾರ ಶಾಲೆಗಳಿಗೆ ನೀಡುತ್ತಿರುವ ವೆಚ್ಚವೆಷ್ಟು ;

(ಊ) ಸರ್ಕಾರ ಶಾಲಾ ನಿರ್ವಹಣೆಗಾಗಿ ಸೂಕ್ತ ಅನುದಾನ ನೀಡದ ಕಾರಣ ಮುಖ್ಯೋಪಾಧ್ಯಾಯರು, ಶಿಕ್ಷಕರು ಮತ್ತು ಮಕ್ಕಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸೂಕ್ತ ಪ್ರಮಾಣದ ಅನುದಾನ ಬಿಡುಗಡೆ ಮಾಡಲು ಸರ್ಕಾರ ಕೈಗೊಂಡ ಕ್ರಮವೇನು ?

## ಧಾರವಾಡದ ಸಂಲಗ್ನ ಕಾಲೇಜುಗಳ ಹುದ್ದೆಗಳ ಕುರಿತು

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ ) –**

೮೮ (೯೫೨) ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದ ಸಂಲಗ್ನ (Constituent) ಕಾಲೇಜುಗಳಾದ ಕರ್ನಾಟಕ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ವಿವಿಧ ಮಹಾವಿದ್ಯಾಲಯಗಳಲ್ಲಿ ಮಂಜೂರಾದ ಹುದ್ದೆಗಳೆಷ್ಟು ; ಅವುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹಾಗೂ ಖಾಲಿ ಇರುವ ಹುದ್ದೆಗಳೆಷ್ಟು ; (ಕಾಲೇಜುವಾರು ವಿವರ ನೀಡುವುದು)

(ಆ) ಈ ಕಾಲೇಜುಗಳಲ್ಲಿ ಈ ಹಿಂದೆ ಯಾವ ವರ್ಷ ನೇಮಕಾತಿಗಳು ನಡೆದಿದೆ ಎಂಬುದರ ಮಾಹಿತಿ ಒದಗಿಸುವುದು ;

(ಇ) ಈ ಕಾಲೇಜುಗಳಲ್ಲಿ ನಿವೃತ್ತಿ, ನಿಧನ, ರಾಜೀನಾಮೆ ಹಾಗೂ ಇತ್ಯಾದಿ ಕಾರಣಗಳಿಂದ ತೆರವಾದ ಹುದ್ದೆಗಳನ್ನು ಯಾವ ಕಾಲಮಿತಿಯಲ್ಲಿ ಭರ್ತಿ ಮಾಡಿಕೊಳ್ಳಲಾಗುವುದು ? (ನಿರ್ದಿಷ್ಟವಾದ ಮಾಹಿತಿ ಒದಗಿಸುವುದು)

## ರಾಜ್ಯದ ವಿಶ್ವವಿದ್ಯಾಲಯಗಳ ಕುರಿತು

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ ) –**

೬೯ (೬೫೩) ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಒಟ್ಟು ಸಾರ್ವಜನಿಕ ವಿಶ್ವವಿದ್ಯಾಲಯಗಳ ಸಂಖ್ಯೆ ಎಷ್ಟು ; ಇವುಗಳಲ್ಲಿ ಮಂಜೂರಾಗಿರುವ, ಸೃಜನೆಯಾಗಿರುವ ಹಾಗೂ ಪ್ರಸ್ತುತ ಖಾಲಿಯಿರುವ ಒಟ್ಟು ಬೋಧಕ ಮತ್ತು ಬೋಧಕೇತರ ಹುದ್ದೆಗಳ ಸಂಖ್ಯೆ ಎಷ್ಟು ; (ವಿಶ್ವವಿದ್ಯಾಲಯವಾರು ಸಂಪೂರ್ಣ ಮಾಹಿತಿ ನೀಡುವುದು)

(ಆ) ಬೋಧಕ ಮತ್ತು ಬೋಧಕೇತರ ಹುದ್ದೆಗಳು ಬೃಹತ್ ಪ್ರಮಾಣದಲ್ಲಿ ಖಾಲಿ ಇರುವುದರಿಂದ ವಿಶ್ವವಿದ್ಯಾಲಯಗಳಲ್ಲಿ ಶಿಕ್ಷಣದ ಗುಣಮಟ್ಟ ಮತ್ತು ಆಡಳಿತಾತ್ಮಕ ಕಾರ್ಯಗಳಿಗೆ ಹಿನ್ನಡೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಬಂದಿದ್ದಲ್ಲಿ, ಖಾಲಿಯಿರುವ ಈ ಹುದ್ದೆಗಳನ್ನು ಹಂತ ಹಂತವಾಗಿ ಅಥವಾ ನೇರವಾಗಿ ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ; ಆರ್ಥಿಕ ಇಲಾಖೆಯ ಸಹಮತಿಯೊಂದಿಗೆ ನೇಮಕಾತಿ ಅಧಿಸೂಚನೆ ಹೊರಡಿಸಲು ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು ;

(ಈ) ಖಾಯಂ ಹುದ್ದೆಗಳು ಭರ್ತಿಯಾಗುವವರೆಗೆ ಶೈಕ್ಷಣಿಕ ಹಿತದೃಷ್ಟಿಯಿಂದ ನೇಮಕ ಮಾಡಿಕೊಳ್ಳಲಾಗಿರುವ ಅತಿಥಿ ಉಪನ್ಯಾಸಕರ ಹಾಗೂ ಹೊರಗುತ್ತಿಗೆ ಆಧಾರದ ಬೋಧಕೇತರ ಸಿಬ್ಬಂದಿಗಳ ಸಂಖ್ಯೆ ಎಷ್ಟು ; ಮತ್ತು ಇವರಿಗೆ ಒದಗಿಸುತ್ತಿರುವ ಸೌಲಭ್ಯಗಳೇನು ;

(ಉ) ಹೊಸದಾಗಿ ಸ್ಥಾಪಿಸಲಾದ ಅಥವಾ ಘೋಷಿಸಲಾದ ವಿಶ್ವವಿದ್ಯಾಲಯಗಳಿಗೆ ಸೃಜನೆಯಾಗಿರುವ (Sanctioned) ಹೊಸ ಹುದ್ದೆಗಳ ಸಂಖ್ಯೆ ಎಷ್ಟು ; ಈ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯನ್ನು ಯಾವ ಕಾಲಮಿತಿಯೊಳಗೆ ಪಾರದರ್ಶಕವಾಗಿ ಪೂರ್ಣಗೊಳಿಸಲಾಗುವುದು ?

## ಸರ್ಕಾರಿ ಮತ್ತು ಅನುದಾನಿತ ಕಾಲೇಜುಗಳಲ್ಲಿ ಶಿಕ್ಷಕರ ಹುದ್ದೆಗಳ ಮಾಹಿತಿ ನೀಡುವ ಬಗ್ಗೆ

**ಶ್ರೀ ಡಿ.ಟಿ. ಶ್ರೀನಿವಾಸ್ (ಡಿ.ಟಿ.ಎಸ್.) (ಶಿಕ್ಷಕರ ಕ್ಷೇತ್ರ) –**

೯೦ (೮೪೯) ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪ್ರಸ್ತುತ ಆಗ್ನೇಯ ಶಿಕ್ಷಕರ ಕ್ಷೇತ್ರ ವ್ಯಾಪ್ತಿಯ ಸರ್ಕಾರಿ ಮತ್ತು ಅನುದಾನಿತ ಶಾಲಾ–ಕಾಲೇಜುಗಳಲ್ಲಿ ಎಷ್ಟು ಶಿಕ್ಷಕರ ಹುದ್ದೆಗಳು ಖಾಲಿ ಇವೆ ; (ಜಿಲ್ಲಾವಾರು ವಿವರ ನೀಡುವುದು)

(ಆ) ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಹಲವು ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಶಿಕ್ಷಕರಿಗೆ ವೇತನ ಅನುದಾನ, ಸೇವಾ ಭದ್ರತೆ ಹಾಗೂ ಇತರೆ ಸೌಲಭ್ಯಗಳನ್ನು ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಇ) ಶಿಕ್ಷಕರ ವರ್ಗಾವಣೆ ಪ್ರಕ್ರಿಯೆಯನ್ನು ಸರಳೀಕರಿಸಿ, ದಂಪತಿ ಪ್ರಕರಣ, ವೈದ್ಯಕೀಯ ಕಾರಣ ಹಾಗೂ ಪರಸ್ಪರ ವರ್ಗಾವಣೆಗೆ ಆದ್ಯತೆ ನೀಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ; ಹಾಗೂ ಶಿಕ್ಷಕರು–ವಿದ್ಯಾರ್ಥಿಗಳ

ಅನುಪಾತವನ್ನು ಕಾಪಾಡಲು ಅಗತ್ಯವಿರುವ ಹೆಚ್ಚುವರಿ ಶಿಕ್ಷಕರನ್ನು ನೇಮಕ ಮಾಡಲು ಸರ್ಕಾರದ ಕ್ರಮವೇನು ;

(ಈ) ಅತಿಥಿ ಶಿಕ್ಷಕರನ್ನು ಅವಲಂಬಿಸುವ ಪರಿಸ್ಥಿತಿ ನಿವಾರಿಸಿ ಖಾಯಂ ಶಿಕ್ಷಕರ ನೇಮಕಾತಿ ಮಾಡಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗಿದೆ ಹಾಗೂ ಗ್ರಾಮೀಣ ಹಾಗೂ ದೂರದ ಪ್ರದೇಶಗಳಲ್ಲಿ ಕರ್ತವ್ಯ ನಿರ್ವಹಿಸುವ ಶಿಕ್ಷಕರಿಗೆ ಸರ್ಕಾರಿ ವಸತಿ ಅಥವಾ ವಸತಿ ಭತ್ಯೆ ಒದಗಿಸುವ ಕುರಿತು ಸರ್ಕಾರದ ಯೋಜನೆಗಳೇನು ;

(ಉ) ಆಗ್ನೇಯ ಶಿಕ್ಷಕರ ಕ್ಷೇತ್ರದ ವ್ಯಾಪ್ತಿಯಲ್ಲಿ ಶಿಕ್ಷಕ–ವಿದ್ಯಾರ್ಥಿ ಅನುಪಾತವನ್ನು ಕಾಪಾಡಲು ಅಗತ್ಯವಿರುವ ಹೆಚ್ಚುವರಿ ಶಿಕ್ಷಕರನ್ನು ನೇಮಕ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

**ಜ್ಯೋತಿ**
ಕಾರ್ಯದರ್ಶಿ (ಪ್ರ.)
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ, ಬೆಂಗಳೂರು, /ಪಿ2

**List of Questions for Oral Answers**

**Total No. of Questions - 15**

# LIST - 6

# KARNATAKA LEGISLATIVE COUNCIL

## ONE HUNDRED AND FIFTY NINTH SESSION

## Monday, the 24th August, 2026

---

**GROUP - I**

1. Minister for Social Welfare
2. Minister for Scheduled Tribes Welfare
3. Minister for Backward Classes Welfare and Kannada and Culture
4. Minister for Forest, Ecology and Environment
5. Minister for School Education and Literacy
6. Minister for Higher Education

---

**SANCTIONING OF ADDITIONAL HOSTELS TO SINDHANUR TALUK**

**Sri Basanagouda Badarli (Elected by Legislative Assembly) -**

76 (880) Will the Minister for Backward Classes Welfare and Kannada and Culture be pleased to state :-

(a) total 05 post metric boys' and girls' hostels of backward classes are functioning in Sindhanur taluk, whether it has come to the notice of the Government that more number of students are submitting applications by seeking admission than the sanctioned strength ;

(b) the sanctioned strength for total 05 hostels is only 693 students, whether it has come to the notice of the Government that it is difficult to provide necessary basic facilities properly for the students, if more number of students are getting admission than the sanctioned strength ;

(c) if so, the measures taken by the Government with regard to sanctioning of required additional hostels according to the number of students who have got admission therein by getting the report from the Chief Executive Officer, Raichur district in this regard ;

(d) the time limit within which the permission would be provided by the Government to construct required number of additional hostels in Sindhanur taluk ?

## IMPROPER SUPPLY OF QUESTION PAPER AND ANSWER SHEET IN THE EXAMINATIONS

**Smt. Hemalatha Nayaka (Elected by Legislative Assembly) -**

77 (903) Will the Minister for Higher Education be pleased to state :-

(a) whether it has come to the notice of the Government that the students have faced hardship due to improper supply of question paper and answer sheets in the examinations that has been held recently in the limit of Koppal University ; the reasons for this chaos ; (details be furnished)

(b) whether it has come to the notice of the Government that students were not able to write the examination in prescribed time due to the confusion that has been caused in the distribution of question paper, answer sheet and the maintenance of registration number in examination centres ; the step taken to resolve the same for such students ; (details to furnished)

(c) whether it has come to the notice of the Government that the negligence of officers regarding the shortage that has been caused without preparing required quantity of question paper and answer sheets in the examinations of Koppal University ; the action that has been taken against the culprits ; (details be furnished)

(d) whether any new system has been introduced for printing of question paper, storage, distribution and

maintenance of examination centres to prevent any disruption to the academic future of students due to such lapses in the examination system in Koppal University ; (details be furnished)

(e) the number of complaints that have been received till date regarding chaos of examination in Koppal University ; the number of students suffered thereof and whether the investigation has been conducted in this regard ; the measures that have been taken based on the investigation report ? (details be furnished)

**REGARDING ACADEMIC PLANS IN KARNATAKA RESIDENTIAL EDUCATION INSTITUTIONS SOCIETY**

**Sri Shivakumar K. (Nominated) -**

78 (925) Will the Minister for Social Welfare be pleased to state :-

(a) the number of students who have died in the hostels in Karnataka Residential Education Institutions Society of the State (KREIS) ; the districtwise information regarding medical, accidental deaths and suicide cases be furnished ;

(b) the number of teachers posts which are lying vacant in the residential schools which are functioning under the Karnataka Residential Educational Institutions Society (KREIS) of the State ; the number of posts for which and the date on which the last recruitment had been conducted ; the number of permanent teachers and contract basis teachers at present ;

(c) whether the shoes and socks that have been provided under the Shoe Bhagya Scheme to the students of the residential schools which are coming in the limit of Karnataka Residential Educational Institutions Society (KREIS) of the State have been purchased by the dalit artisans of the State ; if so, the number of entrepreneurs from which and the amount for which the same have been purchased ; (information be furnished)

(d) the number of cases that have been filed with regard to the corruption, supply of substandard food grains, lack of basic facilities and dereliction of duty in the hostels which are coming under the Social Welfare Department; the steps taken by the Government in this regard ?

**REGARDING MYSURU DASARA PROGRAMME**

**Sri Raghu R. (Elected by Legislative Assembly) -**

79 (816) Will the Minister for Backward Classes Welfare and Kannada and Culture be pleased to state :-

(a) the grant that has been spent to Mysuru Dasara Cultural programmes in the last year ; (information be furnished)

(b) the guidelines that have been complied to select the artists ; (information be furnished)

(c) whether Transparency Act has been complied for the programmes which are more than 5 lakh rupees amount ? (complete information be furnished)

**DELAY IN PROMOTION TO GOVERNMENT SECONDARY SCHOOL TEACHERS WORKING IN THE STATE TO THE POST OF PRE-UNIVERSITY LECTURERS**

**Sri Shashil G.Namoshi (Teachers' Constituency) -**

80 (798) Will the Minister for School Education and Literacy be pleased to state :-

(a) the total number of Government pre-university colleges in the State ; the total number of teaching and non-teaching posts that have been sanctioned to these colleges ; the number of lecturers who are working at present ; (districtwise and divisionwise information along with subject be furnished)

(b) the details of percentage of the lecturers who have been appointed through the promotion from secondary schools in the Government pre-university colleges ; the number of lecturers posts for which the approval have been accorded to fill up through the promotion at present ; (subjectwise and districtwise information of posts be furnished)

(c) the particulars of rules and crtiterias that are being complied by the Government for the promotion of the secondary school teachers to the lecturers of the pre-university colleges ;

(d) the criterias which are bring complied while preparing divisionwise seniority list for providing promotion to the secondary school teachers into lecturers in pre-university colleges ;

(e) the Government has informed that the promotion process of secondary school teachers to the post of pre-university lecturers would be completed in a few months, the reason for not carrying out the promotion process so far ; the timelimit within which the promotion process would be completed ? (details be furnished)

**VALMIKI BHAVANS IN TALUK LEVEL**

**Sri N.S. Boseraju (Elected by Legislative Assembly) -**

81 (891) Will the Minister for Scheduled Tribes Welfare be pleased to state :-

(a) the steps taken by the Government to construct the 'Valmiki Bhavan' of taluk level in Manvi town of Raichur district ;

(b) the year from which the construction of said Bhavan has been sanctioned ; the grant that has been sanctioned and released ? (complete details be furnished)

**MISAPPROPRIATION OF ENVIRONMENT RELIEF FUND**

**Dr. K. Govindaraj (Elected by Legislative Assembly) -**

82 (949) Will the Minister for Forest, Ecology and Environment be pleased to state :-

(a) whether it has come to the notice of the Government that there are no details regarding the utilization of the fund in the affidavit which has been submitted to the National Green Tribunal (NGT) by the Karnataka State Pollution Control Board (KSPCB) which has collected the environment relief fund during the last three years ;

(b) the amount that has been collected by the Karnataka State Pollution Control Board to environment relief fund during the last three years ; (complete information be furnished)

(c) the particulars of procedures of the Environment relief fund ; (complete information be furnished)

(d) the particulars of purpose for which the amount that has been collected by the environment relief fund has been utilised ; (details be furnished)

(e) the steps taken for the restoration of environment with regard to condition of air and water pollution in Bengaluru city ? (details be furnished)

## TEACHERS WITHOUT RURAL WEIGHTAGE ARE GETTING SALARY AS PER COURT ORDER

**Sri Ramojigowda (Graduates' Constituency) -**

83 (839) Will the Minister for School Education and Literacy be pleased to state :-

(a) the teachers without rural weightage are getting salary facilities as per court order, whether it has come to the notice of the Government that teachers who have rural weightage and actually working therein are facing salary disparity ;

(b) the step taken by the Government to resolve the salary disparity of the teachers who have rural weightage ?

## REGARDING MARKS CARD AND DEGREE CERTIFICATES IN UNIVERSITIES OF THE STATE

**Sri H.S. Gopinath (Local Authorities Constituency) -**

84 (953) Will the Minister for Higher Education be pleased to state :-

(a) the number of universities which are coming in the limits of Higher Education ; the particulars thereof ;

districtwise complete information including the year of establishment, the name, address, telephone number of Vice-Vhancellor, Vice-Chancellor (administration) and Registrar (evaluation) who are working at present be furnished ;

(b) whether it has come to the notice of the Government that the students are facing hardship due to the non-issuance of marks cards and degree certificates in various universities of the State ; if so, the steps taken by the Government in this regard ;

(c) the number of students' marks cards and degree certificates which are pending during the last three years ; the reasons for the delay ;

(d) universitywise pendency for the same ;

(e) the timelimit that has been prescribed for issuing the certificate ;

(f) the step taken by the Government in this regard ;

(g) whether the Government have the information about the students who are facing hardship due to unable to submit the applications for employment, higher education, education in abroad or Government recruitment ; (details be furnished)

(h) the action taken by the Government against the universities which have not issued the certificate within the stipulated period ; (details be furnished)

(i) whether it has come to the notice of the Government that the students are facing hardship due to unable to submit the application for employment, higher education, education in abroad or Government recruitment ? (details be furnished)

## DISTRIBUTION OF TEXTBOOK IN INCOMPLETE CAPACITY TO STUDENTS OF PRE-UNIVERSITY COLLEGE

**Sri K. Vivekananda (Teachers' Constituency) -**

85 (822) Will the Minister for School Education and Literacy be pleased to state :-

(a) whether the text books that have been provided by the Government for 1st and 2nd PUC student of the Government pre-university college of the State have been distributed to all such college students of the State in complete capacity ;

(b) whether it has come to the notice of the Government that text books have not yet been distributed to students in some places of the State ; if so, complete details of such cases be furnished ;

(c) eventhough half of the academic year has been elapsed already by commencing pre-university colleges, the text books have not been distributed till now, hence this is hampering the learning of the students the action taken against those who are responsible for the same ?

## DILAPIDATED SCHOOL BUILDINGS IN KALABURAGI DISTRICT

**Sri Thippanappa Kamaknoor (Elected by Legislative Assembly) -**

86 (806) Will the Minister for School Education and Literacy be pleased to state :-

(a) whether it has come to the notice of the Government that the morter on the terrace of the building of the Government higher primary school of Sangolgi (C) in Aland taluk of Kalaburagi district has been collapsed ; whether it is true that the disaster has been averted as Sunday was holiday;

(b) whether it is negligence of the Education Department is sole the reason for this incident that happen right

after the Government women PU college of Kalaburagi city collapsed ; the response of the Government for the outrage of public in this regard ;

(c) out of 11 rooms of this school, classes are being conducting only in 6 rooms, the reasons for the step has not been taken eventhough the officers have recommended to demolish 3 rooms which are in dangerous condition immediately ;

(d) the special action plans that have been taken by the Government for emergency repairs or construction of new rooms by identifying school-college rooms which are in dangerous and dilapidated condition in the State including Kalaburagi district ? (details be furnished)

## RELEASING AN APPROPRIATE GRANT FOR THE MAINTENANCE OF SCHOOLS

**Sri Chidanand M.Gowda (Graduates' Constituency) -**

87 (942) Will the Minister for School Education and Literacy be pleased to state :-

(a) the number of Government primary, higher primary and secondary schools in the State ; (districtwise details be furnished)

(b) the number of Group-D employees which have been sanctioned in the said schools ; the number of employees who are working therein ;

(c) the number of complaints which have been filed against the teachers for making children clean school toilet and schools premises during the last three years ;

(d) the details of the persons who have sweeping garbage and cleaning toilets and managing sanitation work of the school premises as there are no group-D employees in so many schools ; the step that would be taken by the Government for the appointment of a Group-D employee for each school to maintain the said works ;

(e) the grant that is being provided by the Government to the head masters for the maintenance of schools ; the purposes for which the said amount would be utilised ; the expenditure that is being provided by the Government to the schools for question paper and answer sheets of the examinations ;

(f) whether it has come to the notice of the Government that the hardship is being faced for the head masters, teachers and children due to an appropriate grant has not been provided by the Government for the maintenance of schools ; if so, the steps taken by the Government to release an adequate grant for the same ?

## POSTS IN CONSTITUENT COLLEGES OF DHARWAD

**Sri S.V. Sankanur (Graduates' Constituency) -**

88 (952) Will the Minister for Higher Education be pleased to state :-

(a) the posts that have been sanctioned in the various colleges of Karnataka arts, science, commerce which are constituent colleges of Karnataka University, Dharward ; out of which, the number posts which are working and lying vacant ; (collegewise details be furnished)

(b) the information of the year in which the recruitments have been conducted previously in these colleges be furnished ;

(c) the timelimit within which the posts which are lying vacant due to retirement, death, resignation, etc in these colleges would be filled up ? (specific information be furnished)

## REGARDING UNIVERSITIES IN THE STATE

**Sri Nirani Hanamant Rudrappa (Graduates' Constituency) -**

89 (853) Will the Minister for Higher Education be pleased to state :-

(a) the total number of public universities which are functioning at present in the State; out of which, the total number of teaching and non-teaching posts that have been sanctioned, created and lying vacant at present ; (universitywise complete information be furnished)

(b) whether it has come to the notice of the Government that there is setback to the quality of education and administration work in the universities due to the large number of teaching and non-teaching posts are lying vacant ;

(c) if so, the steps taken by the Government to fill up these vacant posts either in the phased manner or direct recruitment ; the reasons for the delay with regard to issuing the recruitment notification with the consent of the Finance Department ;

(d) the number of guest lecturers and outsourced basis non-teaching staff who have been appointed in the interest of academics till the permanent posts are filled up ; and the particulars of facilities which are being provided to them ;

(e) the number of new posts created (sanctioned) to the universities that have been established or newly declared ; the timelimit within which the recruitment process for these posts would be completed transparently ?

**INFORMATION OF POSTS OF TEACHERS IN GOVERNMENT AND AIDED COLLEGES**

**Sri D.T. Srinivas (D.T.S) (Teachers' Constituency) -**

90 (849) Will the Minister for School Education and Literacy be pleased to state :-

(a) the number of posts of teachers which are lying vacant in the Government and aided schools and colleges which are coming in the limit of South-East Teachers' Constituency at present ; (districtwise details be furnished)

(b) the steps taken by the Government to provide the grant-in-aid, service security and other facilities to the teachers who are working in aided educational institutions from several years ;

(c) the steps taken by the Government to provide priority to spouse case, medical grounds and mutual transfers by simplifying the teachers transfer process ; and the steps taken by the Government to recruit the additional teachers to maintain the teacher student ratio ;

(d) the steps taken by the Government to recruit the permanent teachers to eliminate the situation of dependence on guest teachers and the plans of the Government with regard to provide the Government quarters or house rent allowance to teachers who are working in rural and remote areas ;

(e) the steps taken by the Government for the recruitment of required teachers to maintain the teacher-student ratio in the limits of South-East Teachers' Constituency ?

**JYOTI**
Secretary (I/c)
Karnataka Legislative Council

Government Press, Vikasa Soudha Unit, Bengaluru - WD -, - Copies